ದಿ: 26.03.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 39/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಮ್ಮ | ಪ್ರಾ.ಸಾ: 4 |
| ತಂದೆಯ/ಗಂಡನ ಹೆಸರು | : | ಮಹದೇವಪ್ಪ | ಚಾಸಾ: 6 |
| ವಯಸ್ಸು | : | 48 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ದುಮ್ಮಿ ಗೊಲ್ಲರಹಟ್ಟಿ ಗ್ರಾಮ | ದಿ:26.03.2026 |

**(ನ್ಯಾಯಾಲಯದ ಆವರಣದಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ವಕೀಲರು ಮತ್ತು ಕಕಕ್ಷಿದಾರರನ್ನು ಹೊರತುಪಡಿಸಿ ಇತರೆ ಎಲ್ಲಾ ವಕೀಲರು ಮತ್ತು ಕಕ್ಷಿದಾರರನ್ನು ಹೊರಗೆ ಕಳುಹಿಸಿ ಸಾಕ್ಷ್ಯ ದಾಖಲಿಸಲಾಯಿತು.** )

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಸೋದರ ಸಂಬಂಧಿಕರು. ಚಾಸಾ.1, 4, 5, 7 ರಿಂದ 10 ರವರು ನನ್ನ ಸಂಬಂಧಿಕರು. ಚಾಸಾ.2, 3 ಮತ್ತು 11 ಮತ್ತು 12 ರವರು ನಮ್ಮ ಗ್ರಾಮದವರು.

2. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲ. ಆರೋಪಿತರು ನನಗಾಗಲೀ, ಚಾಸಾ.1, 4, 5, 7 ರಿಂದ 10 ರವರಿಗಾಗಲೀ ಯಾವುದೇ ತೊಂದರೆ ನೀಡಿಲ್ಲ. ಈ ಪ್ರಕರಣದ ಕುರಿತು ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದ:**

3. ದಿನಾಂಕ 14.06.2023 ರಂದು ಬೆಳಗ್ಗೆ 8.30 ರ ಸಮಯದಲ್ಲಿ ನಾನು ಮತ್ತು ಚಾಸಾ.1, 4, 5, 7 ರಿಂದ 10 ರವರು ನಮ್ಮ ಗ್ರಾಮದ ನಮಗೆ ಸೇರಿದ ಖಾಲಿ ಜಾಗದಲ್ಲಿ ಕುರಿ ಶೆಡ್‌ನ್ನು ನಿರ್ಮಿತಿ ಮಾಡುತ್ತಿದ್ದಾಗ, 1 ರಿಂದ 4 ನೇ ಆರೋಪಿತರು ನಮ್ಮ ಬಳಿ ಬಂದು ಅವಾಚ್ಯ ಶಬ್ಧಗಳಿಂದ ಬೈದು, 1 ನೇ ಆರೋಪಿ ಕೋಲಿನಿಂದ ಚಾಸಾ.1 ರವರ ಮೈಕೈಗೆ ಹೊಡೆದಿದ್ದು, 4 ನೇ ಆರೋಪಿ ಕಣಿಗೆಯಿಂದ ಚಾಸಾ.5 ರವರ ಹಣೆಗೆ ಹೊಡೆದಿದ್ದು, 2 ಮತ್ತು

ದಿಃ 26.03.2026

3 ನೇ ಆರೋಪಿತರು ಚಾಸಾ.4 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 5 ರಿಂದ 9 ನೇ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಎಲ್ಲರಿಗೂ ಅವಾಚ್ಯ ಶಬ್ಧಗಳಿಂದ ಬೈದು, ಕೈ ಮತ್ತು ಕಾಲುಗಳಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆಯನ್ನು ಬಿಡಿಸಲು ಹೋದ ನನ್ನ ಮತ್ತು ಚಾಸಾ.7 ರವರ ಮೇಲೆ ಗಲಾಟೆ ಮಾಡಿ, ಅವಾಚ್ಯ ಶಬ್ಧಗಳಿಂದ ಬೈದು, 1 ನೇ ಆರೋಪಿ ನನ್ನ ಸೀರೆಯನ್ನು ಹಿಡಿದು ಎಳೆದಾಡಿ ಮಾನಕ್ಕೆ ಚ್ಯುತಿ ಉಂಟುಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಆರೋಪಿ ಚಾಸಾ.7 ರವರಿಗೆ ಮೈಕೈಗೆ ಹೊಡೆದಿದ್ದು, ಬಿಡಿಸಲು ಬಂದ ಚಾಸಾ.8 ಮತ್ತು 10 ರವರಿಗೆ ಕೈ ಮತ್ತು ಕಾಲುಗಳಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ನನಗೆ ಮತ್ತು ಚಾಸಾ.1, 4, 5, 7 ರಿಂದ 10 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 16.06.2023 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.4 ಎಂದು ಗುರುತಿಸಲಾಯಿತು.

4. ನಾವು ಮತ್ತು ಆರೋಪಿತರು ಸೋದರ ಸಂಬಂಧಿಗಳಾಗಿದ್ದು, ನಮ್ಮಗಳ ನಡುವೆ ಎದುರು ದೂರುಗಳು ದಾಖಲಾಗಿದ್ದು, ಹಾಗಾಗಿ ನಾವು ಮತ್ತು ಆರೋಪಿತರು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.